**ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರವಾಗಿ ಶ್ರೀಮತಿ ಎನ್.ಪಿ.ಆರ್ ವಕೀಲರಿಂದ:**

ನಾನು ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು, ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ.

ಈ ದಾವೆಗೆ ಪೂರಕವಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.-1 | ಅಸಲು ದಾವೆ ಸಂಖ್ಯೆ 265/2015 ರಲ್ಲಿನ ಆದೇಶ ಪುಟಗಳ ದೃಢಿಕೃತ ನಕಲು |
| ನಿ.ಪಿ.-2 | ವಾದ ಪತ್ರದ ದೃಢಿಕೃತ ನಕಲು |
| ನಿ.ಪಿ.-3 | ಮಧ್ಯಂತರ ಅರ್ಜಿಯ ದೃಢಿಕೃತ ನಕಲು |
| ನಿ.ಪಿ.-4 | ದಿನಾಂಕ 03.02.2021 ವಿಚ್ಛೇಧನ ನೋಟಿಸು |
| ನಿ.ಪಿ.-5 ರಿಂದ 10 | ಅಂಚೆ ರಶೀದಿಗಳು |
| ನಿ.ಪಿ.-11 ರಿಂದ 13 | ಅಂಚೆ ಸ್ವೀಕೃತಿಗಳು |
| ನಿ.ಪಿ.-14 | ಜಾರಿಯಾಗದ ಅಂಚೆ ಲಕೋಟೆ |
| ನಿ.ಪಿ.-15 | ನಿ.ಪಿ.-14 ಲಕೋಟೆಯ ಒಳಗಿದ್ದ ನೋಟಿಸಿನ ಪ್ರತಿ |
| ನಿ.ಪಿ.-16 | ಮತ್ತೊಂದು ಜಾರಿಯಾಗದ ಅಂಚೆ ಲಕೋಟೆ |
| ನಿ.ಪಿ.-17 | ನಿ.ಪಿ.-16 ಲಕೋಟೆಯ ಒಳಗಿದ್ದ ನೋಟಿಸಿನ ಪ್ರತಿ |
| ನಿ.ಪಿ.-18 | ದಿನಾಂಕ 24.12.2024 ರ ವಿಚ್ಛೇಧನ ನೋಟಿಸು |

| | |
|---|---|
| ನಿ.ಪಿ.–19 ರಿಂದ 24 | ಅಂಚೆ ರಶೀದಿಗಳು |
| ನಿ.ಪಿ.–25 ರಿಂದ 29 | ಅಂಚೆ ಸ್ವೀಕೃತಿಗಳು |
| ನಿ.ಪಿ.–30 | ದಿನಾಂಕ 29.01.2025 ರ ವಿಚ್ಚೇಧನ ನೋಟಿಸು |
| ನಿ.ಪಿ.–31 ರಿಂದ 36 | ಅಂಚೆ ರಶೀದಿಗಳು |
| ನಿ.ಪಿ.–37 ರಿಂದ 41 | ಅಂಚೆ ಸ್ವೀಕೃತಿಗಳು |
| ನಿ.ಪಿ.–42 | ದಿನಾಂಕ 05.03.2025 ರ ವಿಚ್ಚೇಧನ ನೋಟಿಸು |

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿ ಮತ್ತು ವಕೀಲರು ಗೈರು ಹಾಜರಿದ್ದು ನ್ಯಾಯದ ದೃಷ್ಟಯಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**